**D**

**CCE PR**
**UNREVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 26. 06. 2019 ] **ಸಂಕೇತ ಸಂಖ್ಯೆ : 85-K**

Date : 26. 06. 2019 ] **CODE NO. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 10 × 1 = 10 | |
| 1. | ಭಾರತದ ಪ್ರಥಮ ಗೃಹ ಮಂತ್ರಿ<br>(A) ಸರದಾರ್ ವಲ್ಲಭಬಾಯಿ ಪಟೇಲ್<br>(B) ಸುಭಾಷ್ ಚಂದ್ರ ಬೋಸ್<br>(C) ಜವಾಹರಲಾಲ್ ನೆಹರೂ<br>(D) ಬಾಬು ರಾಜೇದ್ರ ಪ್ರಸಾದ್<br>***ಉತ್ತರ :*** (A) ಸರದಾರ್ ವಲ್ಲಭಬಾಯಿ ಪಟೇಲ್ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಭಾರತ ಸರ್ಕಾರವು ರಾಜ್ಯ ಪುನರ್ ವಿಂಗಡಣಾ ಕಾಯ್ದೆಯನ್ನು ಜಾರಿಗೆ ತಂದ ವರ್ಷ<br>(A) 1953 (B) 1955<br>(C) 1956 (D) 1958<br>***ಉತ್ತರ :*** (C) 1956 | 1 |
| 3. | ಭಾರತವು ಹಲವಾರು ವ್ಯಾಪಾರದ ರಿಯಾಯಿತಿಗಳನ್ನು ನೇಪಾಳಕ್ಕೆ ನೀಡಿದೆ. ಏಕೆಂದರೆ ನೇಪಾಳವು<br>(A) ಪರ್ವತಗಳಿಂದ ಆವೃತವಾದ ಮತ್ತು ಭೌಗೋಳಿಕವಾಗಿ ಸಮೀಪದಲ್ಲಿರುವುದರಿಂದ<br>(B) ನಮ್ಮ ಬೃಹತ್ ನೆರೆ ರಾಷ್ಟ್ರವಾಗಿರುವುದರಿಂದ<br>(C) ನಮ್ಮ ರಾಷ್ಟ್ರದ ಗೌರವ ಕಾಪಾಡಬೇಕಾಗಿರುವುದರಿಂದ<br>(D) ಅದು ಬಲಿಷ್ಠ ರಾಷ್ಟ್ರವಾಗಿರುವುದರಿಂದ<br>***ಉತ್ತರ :*** (A) ಪರ್ವತಗಳಿಂದ ಆವೃತವಾದ ಮತ್ತು ಭೌಗೋಳಿಕವಾಗಿ ಸಮೀಪದಲ್ಲಿರುವುದರಿಂದ | 1 |
| 4. | ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಬಳಕೆಯನ್ನು ಸಂಪೂರ್ಣವಾಗಿ ನೇರ ಪ್ರಕ್ರಿಯೆಯೇ<br>(A) ಭಯಾನಕ ಪೈಪೋಟಿ<br>(B) ಶಸ್ತ್ರಾಸ್ತ್ರ ಪೈಪೋಟಿ<br>(C) ಶಸ್ತ್ರಾಸ್ತ್ರಗಳ ಸಂಗ್ರಹ<br>(D) ನಿಶ್ಶಸ್ತ್ರೀಕರಣ<br>***ಉತ್ತರ :*** (D) ನಿಶ್ಶಸ್ತ್ರೀಕರಣ | 1 |
| 5. | ಮಕ್ಕಳ ದುಡಿಮೆ ಎಂಬುದು ಸಾಮಾಜಿಕ ವ್ಯವಸೆಯ ಒಂದು ಗಂಭೀರ ಪಿಡುಗು ಏಕೆಂದರೆ ಅವರು<br>(A) ವಲಸೆಗಾರರಾಗಿರುತ್ತಾರೆ<br>(B) ತಂದೆ ತಾಯಿಯನ್ನು ಕಳೆದುಕೊಂಡಿರುತ್ತಾರ<br>(C) ದೈಹಿಕವಾಗಿ, ಮಾನಸಿಕವಾಗಿ ಹಿಂಸೆಗೊಳಗಾಗುತ್ತಾರೆ<br>(D) ಬಡವರಾಗಿರುತ್ತಾರೆ<br>***ಉತ್ತರ :*** (C) ದೈಹಿಕವಾಗಿ, ಮಾನಸಿಕವಾಗಿ ಹಿಂಸೆಗೊಳಗಾಗುತ್ತಾರೆ | 1 |
| 6. | ಭಾರತದ ವ್ಯವಸಾಯವನ್ನು ಮಾನ್‌ಸೂನ್ ಜೊತೆಯಲ್ಲಿ ಆಡುವ ಜೂಜಾಟ ಎಂದು ಕರೆಯಲು ಕಾರಣ ಮಾನ್‌ಸೂನ್<br>(A) ರೈತರಿಗೆ ಯಾವಾಗಲೂ ಉತ್ತಮ ಬೆಳೆ ನೀಡುತ್ತದೆ<br>(B) ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತದೆ<br>(C) ತಮಿಳುನಾಡಿಗೆ ಹೆಚ್ಚು ಮಳೆ ತರುವುದಿಲ್ಲ<br>(D) ರೈತರು ಬೇರೆ ಬೇರೆ ಬೆಳೆ ಬೆಳೆಯಲು ಸಹಾಯ ಮಾಡುತ್ತದೆ<br>***ಉತ್ತರ :*** (B) ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತದೆ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 7. | ಈ ನಕ್ಷೆಯಲ್ಲಿ ಗುರುತಿಸಿರುವ ಯೋಜನೆಗಳಿಗೆ ಕ್ರಮವಾಗಿ ಹೋಲಿಕೆಯಾಗುವುದು : <br>(A) 1 — ಭಾಕ್ರಾನಂಗಲ್, 2 — ನಾಗಾರ್ಜುನಸಾಗರ, 3 — ದಾಮೋದರ ಕಣಿವೆ<br>(B) 1 — ದಾಮೋದರ ಕಣಿವೆ, 2 — ಭಾಕ್ರಾನಂಗಲ್, 3 — ನಾಗಾರ್ಜುನಸಾಗರ<br>(C) 1 — ಭಾಕ್ರಾನಂಗಲ್, 2 — ದಾಮೋದರ ಕಣಿವೆ, 3 — ನಾಗಾರ್ಜುನಸಾಗರ<br>(D) 1 — ನಾಗಾರ್ಜುನಸಾಗರ, 2 — ಭಾಕ್ರಾನಂಗಲ್, 3 — ದಾಮೋದರ ಕಣಿವೆ<br>***ಉತ್ತರ :*** (C) 1 — ಭಾಕ್ರಾನಂಗಲ್, 2 — ದಾಮೋದರ ಕಣಿವೆ, 3 — ನಾಗಾರ್ಜುನಸಾಗರ | 1 |
| 8. | **A ಪಟ್ಟಿ**ಯಲ್ಲಿರುವ ಉದ್ಯಮಿಗಳು ಮತ್ತು **B ಪಟ್ಟಿ**ಯಲ್ಲಿ ಅವರಿಂದ ಸ್ಥಾಪಿತವಾದ ಉದ್ಯಮಗಳನ್ನು ನೀಡಲಾಗಿದೆ. ಅವುಗಳಿಗೆ ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ :<br>***A ಪಟ್ಟಿ*** — ***A ಪಟ್ಟಿ***<br>(a) ಅಜೀಮ್ ಪ್ರೇಮ್‌ಜಿ — (i) ರಿಲಯನ್ಸ್ ಸಂಸ್ಥೆ<br>(b) ನಾರಾಯಣಮೂರ್ತಿ — (ii) ಅಪೋಲೋ ವೈದ್ಯ ಶಾಲೆಗಳ ಗುಂಪು<br>(c) ಧೀರುಬಾಯಿ ಅಂಬಾನಿ — (iii) ವಿಪ್ರೋ ತಂತ್ರಜ್ಞಾನ<br>(d) ಡಾ. ಪ್ರತಾಪ ರೆಡ್ಡಿ — (iv) ಇನ್‌ಫೋಸಿಸ್<br><br>*a b c d*<br>(A) ii i iii iv<br>(B) iii iv i ii<br>(C) iv iii ii i<br>(D) i ii iv iii<br><br>***ಉತ್ತರ :*** (B) (a) — (iii), (b) — (iv), (c) — (i), (d) — (ii) | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | ಸರ್ಕಾರದ ಆಯವ್ಯಯ ಪತ್ರದಲ್ಲಿ ಹೆಚ್ಚು ಪ್ರಾಮುಖ್ಯತೆ ಕೊಡುವ ಅಂಶ ಸರ್ಕಾರದ<br>(A) ತೆರಿಗೆ ಸಂಗ್ರಹಗಳು (B) ಆದಾಯ ಮತ್ತು ವಚ್ಚಗಳು<br>(C) ಕಾನೂನು ನಿಯಮಗಳು (D) ಅಭಿವೃದ್ಧಿ ಕಾರ್ಯಗಳು<br>***ಉತ್ತರ :*** (B) ಆದಾಯ ಮತ್ತು ವೆಚ್ಚಗಳು | 1 |
| 10. | ರಿಸರ್ವ್ ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಎಂದು ಕರೆಯುವರು ಏಕೆಂದರೆ ಇದು<br>(A) ಭಾರತದ ಎಲ್ಲಾ ಬ್ಯಾಂಕುಗಳ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ<br>(B) ಅಂಚೆ ಇಲಾಖೆಯ ಒಂದು ಭಾಗವಾಗಿದೆ<br>(C) ಖಾಸಗಿ ವಲಯದ ಬ್ಯಾಂಕ್ ಆಗಿದೆ<br>(D) ರೈತರಿಗೆ ಸಾಲ ನೀಡುತ್ತದೆ<br>***ಉತ್ತರ :*** (A) ಭಾರತದ ಎಲ್ಲಾ ಬ್ಯಾಂಕುಗಳ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ | 1 |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $14 \times 1 = 14$ | |
| 11. | ಜನಸಾಮಾನ್ಯರ ಚರಿತ್ರೆಯನ್ನು ರಚಿಸುವುದು ಚರಿತ್ರೆಕಾರರಿಗೆ ಸವಾಲಾಗಿತ್ತು. ಏಕೆ ?<br>***ಉತ್ತರ :***<br>* ಶೇಕಡಾ 70 ರಷ್ಟು ಜನರು ಅನಕ್ಷರಸ್ಥರಾಗಿದ್ದರು<br>* ಮೌಖಿಕ ಸಾಹಿತ್ಯ ಉತ್ಪ್ರೇಕ್ಷೆಗಳಿಂದಿರಬಹುದು | 1 |
| 12. | 1935 ರ ಶಾಸನವು ಭಾರತ ಸಂವಿಧಾನಕ್ಕೆ ಆಧಾರವಾಗಿದೆ. ಹೇಗೆ ?<br>***ಉತ್ತರ :***<br>ಆಡಳಿತದಲ್ಲಿ ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಿದೆ. | 1 |
| 13. | ಹಿಟ್ಲರನು ಜರ್ಮನಿಯಲ್ಲಿ ಯಹೂದಿಗಳ ಸಂಖ್ಯೆ ಕಡಿಮೆ ಮಾಡಲು ಕೈಗೊಂಡ ಕ್ರಮ ಯಾವುದು ?<br>***ಉತ್ತರ :***<br>ಲಕ್ಷಾಂತರ ಯಹೂದಿಗಳನ್ನು ಕೊಲ್ಲಿಸಿದನು | 1 |
| 14. | ಪ್ರಗತಿ ಪಥದಲ್ಲಿ ಸ್ತ್ರೀಯರ ಸ್ಥಾನಮಾನವು ಹಿಂದುಳಿಯಲು ಕಾರಣವೇನು ?<br>***ಉತ್ತರ :***<br>* ಸಾಮಾಜಿಕ ಪದ್ಧತಿಗಳು<br>* ಬಡತನ, ಅನಕ್ಷರತೆ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 15. | ಭಾರತವು ವಿಶ್ವಸಂಸ್ಥೆಯೊಂದಿಗೆ ಹೇಗೆ ಸಹಕರಿಸುತ್ತಿದೆ ? | |
| | ***ಉತ್ತರ :*** | |
| | ವಿಶ್ವಶಾಂತಿ ಹಾಗೂ ಮಾನವ ಹಕ್ಕುಗಳ ರಕ್ಷಣೆಗೆ ಪ್ರೋತ್ಸಾಹ. | 1 |
| 16. | ಇತ್ತೀಚಿನ ದಿನಗಳಲ್ಲಿ ಅಸ್ಪೃಶ್ಯತಾ ಆಚರಣೆ ಕಡಿಮೆಯಾಗಲು ಕಾರಣವೇನು ? | |
| | ***ಉತ್ತರ :*** | |
| | * ಕಠಿಣ ಕಾನೂನಿನ ಆಚರಣೆ | |
| | * ಹೆಚ್ಚುತ್ತಿರುವ ಸಾಕ್ಷರತೆ (ಯಾವುದಾದರೂ ಒಂದು) | 1 |
| 17. | ಇತ್ತೀಚಿಗೆ ಗರ್ಭಪಾತದ ಪ್ರಕರಣಗಳು ಹೆಚ್ಚುತ್ತಿರಲು ಕಾರಣವೇನು ? | |
| | ***ಉತ್ತರ :*** | |
| | ಹೆಣ್ಣು ಭ್ರೂಣ ಹತ್ಯೆ | 1 |
| 18. | ಜೀವನಾಧಾರ ಬೇಸಾಯ ಎಂದರೇನು ? | |
| | ***ಉತ್ತರ :*** | |
| | ರೈತರು ತಮ್ಮ ಜೀವನಕ್ಕೆ ಅವಶ್ಯಕವಿರುವ ಆಹಾರ ಧ್ಯಾನ ಬೆಳೆಯುವುದು. | 1 |
| 19. | ಭಾರತದಲ್ಲಿ ಅತೀ ಹೆಚ್ಚು ಭತ್ತ ಬೆಳೆಯುವ ರಾಜ್ಯ ಯಾವುದು ? | |
| | ***ಉತ್ತರ :*** | |
| | ಪಶ್ಚಿಮ ಬಂಗಾಳ | 1 |
| 20. | ಕಾರಿಡಾರ್ ರಸ್ತೆಗಳು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿವೆ. ಏಕೆ ? | |
| | ***ಉತ್ತರ :*** | |
| | ಕಡಿಮೆ ವೆಚ್ಚದಲ್ಲಿ ಸರಕು ಸಾಮಗ್ರಿಗಳನ್ನು ತಡೆ ಇಲ್ಲದೆ ಶೀಘ್ರವಾಗಿ ಸಾಗಿಸುತ್ತವ. | 1 |
| 21. | ಪೆಟ್ರೋಲಿಯಂ ದ್ರವರೂಪದ ಚಿನ್ನ ಎಂದು ಏಕೆ ಕರೆಯಲ್ಪಡುತ್ತದೆ ? | |
| | ***ಉತ್ತರ :*** | |
| | ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದುದು. | 1 |
| 22. | ತಲಾ ಆದಾಯವು ಅಭಿವೃದ್ಧಿಯ ನೈಜ ಮಾಪಕವಾಗಲಾರದು. ಏಕೆ ? | |
| | ***ಉತ್ತರ :*** | |
| | ಆದಾಯವು ಜನರ ನಡುವೆ ಅಸಮರ್ಪಕ ಹಂಚಿಕೆಯಾಗಿರುವುದರಿಂದ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 23. | ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಹೇಗೆ ಅಳೆಯಲಾಗುತ್ತದೆ ?<br>**ಉತ್ತರ :**<br>* ಸರಾಸರಿ ಶಾಲಾ ಶಿಕ್ಷಣದ ವರ್ಷಗಳು (6 ರಿಂದ 18 ರ ವಯಸ್ಸಿನೊಳಗೆ)<br>* ನಿರೀಕ್ಷಿತ ಶಾಲಾ ಶಿಕ್ಷಣದ ವರ್ಷಗಳು | 1 |
| 24. | ನಾಸ್‌ಡಾಕ್ ( NASDAQ ) ನಲ್ಲಿ ನೊಂದಾಯಿಸಲ್ಪಟ್ಟ ಪ್ರಥಮ ತಂತ್ರಜ್ಞಾನ ಸಂಸ್ಥೆ ಯಾವುದು ?<br>**ಉತ್ತರ :**<br>ಇನ್‌ಫೋಸಿಸ್ | 1 |
| III. | **ಎರಡು ವಾಕ್ಯಗಳಲ್ಲಿ ಉತ್ತರಿಸುವುದು :** 25 × 2 = 50 | |
| 25. | ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ. ಈ ಹೇಳಿಕೆಯನ್ನು ಸಮರ್ಥಿಸಿ.<br>**ಉತ್ತರ :**<br>* ವೈಜ್ಞಾನಿಕ ಸಲಕರಣೆಗಳಾದ ಸಿಡಿಮದ್ದು, ನೌಕಾ ಉಪಕರಣಗಳು ಧೈರ್ಯ ತುಂಬಿದವು<br>* ಭೂಪಟ ಇತ್ಯಾದಿ ಬಳಕೆ ನೌಕಾಯಾನಕ್ಕೆ ಸಹಕರಿಸಿದವು<br>* ಪೂರ್ವ ದೇಶಗಳ ಬಗ್ಗೆ ಹೇಳಲಾಗುತ್ತಿದ್ದ ಕಥೆಗಳು ಆಕರ್ಷಿಸಿದವು<br>* ಮಿಷನರಿಗಳು ಧರ್ಮ ಪ್ರಚಾರಕ್ಕೆ ಮುಂದಾದವು 4 × ½ | 2 |
| 26. | ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳನ್ನು ವಿವರಿಸಿ.<br>**ಉತ್ತರ :**<br>* ಟಿಪ್ಪು ಅವನ ಅರ್ಧರಾಜ್ಯವನ್ನು ಬ್ರಿಟಿಷರಿಗೆ ಬಿಟ್ಟು ಕೊಟ್ಟನು<br>* ಬ್ರಿಟಿಷರಿಗೆ 330 ಲಕ್ಷ ರೂಪಾಯಿಗಳ ಯುದ್ಧ ಪರಿಹಾರಧನ ನೀಡಿದನು<br>* ತನ್ನ ಎರಡು ಮಕ್ಕಳನ್ನು ಇಂಗ್ಲಿಷರ ಬಳಿ ಒತ್ತೆ ಇಟ್ಟನು<br>* ಮೈಸೂರಿನ ಅಧೀನದಲ್ಲಿದ್ದ ತಮಿಳುನಾಡಿನ ಕೆಲವು ಪ್ರದೇಶಗಳನ್ನು ಬ್ರಿಟಿಷರಿಗೆ ನೀಡಿದನು 4 × ½ | 2 |
| 27. | ಬ್ರಹ್ಮಸಮಾಜದ ಉದ್ದೇಶಗಳನ್ನು ವಿವರಿಸಿ.<br>**ಅಥವಾ**<br>ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳು ಯಾವುವು ?<br>**ಉತ್ತರ :**<br>* ಹಿಂದೂ ಧರ್ಮದಲ್ಲಿದ್ದ ಆಚಾರ ವಿಚಾರಗಳ ಸುಧಾರಣೆಗೆ ಪ್ರಯತ್ನಿಸಿತು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | * ವಿಗ್ರಹಾರಾಧನೆಯನ್ನು ವಿರೋಧಿಸಿತು | | |
| | * ಬಹುದೇವತಾರಾಧನೆಯನ್ನು ವಿರೋಧಿಸಿತು | | |
| | * ಪುರೋಹಿತ ಶಾಹಿಯನ್ನು ಖಂಡಿಸಿತು | | |
| | * ಏಕ ದೇವತಾರಾಧನೆಯನ್ನು ಪ್ರೋತ್ಸಾಹಿಸಿತು | | |
| | (ಯಾವುದಾದರೂ ನಾಲ್ಕು ಅಂಶಗಳು) | 4 × ½ | 2 |
| | ***ಅಥವಾ*** | | |
| | * ಪಾನ ನಿಷೇಧವನ್ನು ಒತ್ತಾಯಿಸಿತು | | |
| | * ಸ್ತ್ರೀ ಪುರುಷರ ಅಸಮಾನತೆಯನ್ನು ವಿರೋಧಿಸಿತು | | |
| | * ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿ ನಡೆಸಿತು | | |
| | * ಗುಲಾಮಗಿರಿಯನ್ನು ಖಂಡಿಸಿತು | | 2 |
| 28. | ಝಾರ್‌ಶಾಹಿಯನ್ನು ರಾಷ್ಟ್ರೀಯತೆಯ ಜೈಲು ಎಂದು ಏಕೆ ಕರೆಯುತ್ತಿದ್ದರು ? | | |
| | ***ಉತ್ತರ :*** | | |
| | * ಜಮಿನ್ದಾರರು ರೈತರನ್ನು ಶೋಷಿಸುತ್ತಿದ್ದರು | | |
| | * ಬಡವರು ಮತ್ತು ಕಾರ್ಮಿಕರನ್ನು ಶೋಷಿಸುತ್ತಿದ್ದರು | | |
| | * ಚಕ್ರವರ್ತಿಗಳ ಆಳ್ವಿಕೆಯಿಂದ ಜನರು ಬೇಸತ್ತಿದ್ದರು | | |
| | * ಝಾರ್ ದೊರೆಗಳ ಆಳ್ವಿಕೆ ಕ್ರೂರವಾಗಿತ್ತು | 4 × ½ | 2 |
| 29. | ಹೈದ್ರಾಬಾದ್ ಕರ್ನಾಟಕದ ಪ್ರದೇಶಗಳನ್ನು ಹೆಸರಿಸಿ. | | |
| | ***ಉತ್ತರ :*** | | |
| | * ಬೀದರ್ | | |
| | * ಕಲ್ಬುರ್ಗಿ | | |
| | * ಯಾದಗಿರಿ | | |
| | * ಕೊಪ್ಪಳ | | |
| | * ಬಳ್ಳಾರಿ | | |
| | * ರಾಯಚೂರು | | |
| | (ಯಾವುದಾದರೂ ನಾಲ್ಕು ಅಂಶಗಳು) | 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 30. | 1857 ರ ದಂಗೆಯ ವಿಫಲತೆಗೆ ಕಾರಣವೇನು ? ವಿವರಿಸಿ. | |
| | ***ಉತ್ತರ :*** | |
| | * ಇಡೀ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ | |
| | * ಅನಿರೀಕ್ಷಿತ ದಂಗೆಯಾಗಿತ್ತು | |
| | * ಸೈನಿಕರಿಗೆ ಸೂಕ್ತ ಮಾರ್ಗದರ್ಶನದ ಕೊರತೆ ಇತ್ತು | |
| | * ಸೈನಿಕರಲ್ಲಿ ಶಿಸ್ತಿನ ಕೊರತೆ ಇತ್ತು | |
| | * ಸಿಪಾಯಿಗಳು ಜನರ ವಿಶ್ವಾಸ ಕಳೆದುಕೊಂಡಿದ್ದರು | |
| | (ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| 31. | ನಿರಾಶ್ರಿತರ ಸಮಸ್ಯೆಯನ್ನು ಸ್ವತಂತ್ರ ಭಾರತವು ಹೇಗೆ ಎದುರಿಸಿತು ? | |
| | ***ಉತ್ತರ :*** | |
| | * ವಸತಿ ಸೌಕರ್ಯ ನೀಡಿದರು | |
| | * ಉದ್ಯೋಗ ಒದಗಿಸುವುದರ ಮೂಲಕ | |
| | * ಭೂಮಿ ನೀಡುವುದರ ಮೂಲಕ | |
| | * ಶಿಕ್ಷಣ ಮತ್ತು ಆರೋಗ್ಯ ನೀಡುವುದು | |
| | * ಸಾಮಾಜಿಕ ವಾತಾವರಣ ಕಲ್ಪಿಸುವುದು | |
| | (ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| 32. | ಅನಕ್ಷರತೆಯನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು ? | |
| | ***ಉತ್ತರ :*** | |
| | * ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದ ಅನುಷ್ಠಾನ | |
| | * ರಾಷ್ಟ್ರೀಯ ಸಾಕ್ಷರತ ಮಿಷನ್ ಸ್ಥಾಪನೆ | |
| | * ಶಿಕ್ಷಣದ ಹಕ್ಕು ಕಾಯ್ದೆ ( RTE ) ಜಾರಿ | |
| | * ಉಚಿತ ಮತ್ತು ಕಡ್ಡಾಯ ಶಿಕ್ಷಣ ಅನುಷ್ಠಾನ 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 33. | ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ ?<br>***ಉತ್ತರ :***<br>∗ ಸಾಮಾಜಿಕ ಭಿನ್ನತೆಯನ್ನು ಸೃಷ್ಟಿಸುವುದು<br>∗ ಪರಸ್ಪರ ಅಪನಂಬಿಕೆ ಸೃಷ್ಟಿಸುವುದು<br>∗ ಸಮಾಜದ ನೆಮ್ಮದಿ ಕೆಡಿಸುತ್ತದೆ<br>∗ ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಯನ್ನು ಭಂಗಪಡಿಸುವುದು 4 × ½ | 2 |
| 34. | ಭದ್ರತಾ ಸಮಿತಿಯ ಕಾರ್ಯಗಳು ಯಾವುವು ?<br>***ಉತ್ತರ :***<br>∗ ಜಾಗತಿಕ ಸಮಸ್ಯೆಗೆ ಪರಿಹಾರ ನೀಡುವುದು<br>∗ ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆಯನ್ನು ಅಂತರ್‌ರಾಷ್ಟ್ರೀಯ ಶಾಂತಿಗೆ ನಿಯೋಜಿಸುವುದು<br>∗ ಅಂತರ್‌ರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ನೇಮಕ ಮಾಡುವುದು<br>∗ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚಿಸುವುದು<br>4 × ½ | 2 |
| 35. | ವರದಕ್ಷಿಣೆ ಪಿಡುಗಿನಿಂದಾಗುವ ದುಷ್ಪರಿಣಾಮಗಳು ಯಾವುವು ?<br>***ಉತ್ತರ :***<br>∗ ಸ್ತ್ರೀಯರ ಗೌರವ ಕುಗ್ಗಿಸುತ್ತದೆ<br>∗ ಸ್ತ್ರೀಯರ ಸ್ವಾಭಿಮಾನವನ್ನು ಕುಗ್ಗಿಸುವುದು<br>∗ ಕೌಟುಂಬಿಕ ಕಲಹ ಉಂಟು ಮಾಡುತ್ತದೆ<br>∗ ಗಂಡ ಹೆಂಡತಿ ನಡುವೆ ಬಿರುಕು ಉಂಟುಮಾಡುತ್ತದೆ<br>∗ ಹೆಣ್ಣು ಭ್ರೂಣಹತ್ಯೆ ಮತ್ತು ಹೆಣ್ಣು ಶಿಶುಹತ್ಯೆ ಪ್ರಕರಣಗಳು ಹೆಚ್ಚುತ್ತವೆ<br>(ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| 36. | ದೊಂಬಿಯ ಸ್ವರೂಪವನ್ನು ವಿವರಿಸಿ.<br>***ಉತ್ತರ :***<br>∗ ಎದುರಿಗೆ ಸಿಕ್ಕಿದ್ದೆಲ್ಲವನ್ನು ಹಾಳು ಮಾಡುವುದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | ✳ ಅಪಾರ ಆಸ್ತಿಪಾಸ್ತಿ ಹಾನಿಯಾಗುತ್ತದೆ | | |
| | ✳ ಇವುಗಳಿಗೆ ನಿಶ್ಚಿತ ಗುರಿ ಇರುವುದಿಲ್ಲ | | |
| | ✳ ಕಾನೂನು ಸುವ್ಯವಸ್ಥೆಗೆ ಗಂಭೀರ ಸವಾಲುಗಳಾಗಿವೆ | 4 × ½ | 2 |
| 37. | ಉತ್ತರ ಮೈದಾನವನ್ನು ವಿವರಿಸಿ. | | |
| | ***ಉತ್ತರ :*** | | |
| | ✳ ಇದು ಹಿಮಾಲಯ ಪರ್ವತ ಮತ್ತು ದಕ್ಷಿಣ ಪರ್ಯಾಯ ಪ್ರಸ್ಥಭೂಮಿ ಮಧ್ಯೆ ಬರುತ್ತದೆ. | | |
| | ✳ ಸಿಂಧೂ ನದಿಯಿಂದ ಬ್ರಹ್ಮಪುತ್ರ ನದಿಯವರೆಗೆ ವಿಸ್ತರಿಸಿದೆ | | |
| | ✳ ಬಹುತೇಕ ಅಗಲ ಮತ್ತು ಸಮತಟ್ಟಾಗಿದೆ | | |
| | ✳ ನದಿಗಳು ಹೊತ್ತುತಂದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿವೆ | 4 × ½ | 2 |
| 38. | ಮಣ್ಣಿನ ಸವೆತಕ್ಕೆ ಕಾರಣಗಳೇನು ? | | |
| | ***ಉತ್ತರ :*** | | |
| | ✳ ಅರಣ್ಯನಾಶ | | |
| | ✳ ಸಾಕು ಪ್ರಾಣಿಗಳನ್ನು ಮೇಯಿಸುವುದು | | |
| | ✳ ಅವೈಜ್ಞಾನಿಕ ಬೇಸಾಯ | | |
| | ✳ ಅಧಿಕ ನೀರಾವರಿಯ ಬಳಕೆ | 4 × ½ | 2 |
| 39. | ಅರಣ್ಯನಾಶಕ್ಕೆ ಮುಖ್ಯ ಕಾರಣಗಳೇನು ? | | |
| | ***ಉತ್ತರ :*** | | |
| | ✳ ವ್ಯವಸಾಯದ ವಿಸ್ತರಣೆ | | |
| | ✳ ರಸ್ತೆ ಹಾಗೂ ರೈಲು ಮಾರ್ಗಗಳ ನಿರ್ಮಾಣ | | |
| | ✳ ಅರಣ್ಯಗಳಿಗೆ ಕಾಡ್ಗಿಚ್ಚು ಹಬ್ಬುವುದು | | |
| | ✳ ಗಣಿಗಾರಿಕೆ ಮತ್ತು ನೀರಾವರಿ ಯೋಜನೆಗಳ ನಿರ್ಮಾಣ | 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| 40. | ಇತ್ತೀಚಿನ ದಿನಗಳಲ್ಲಿ ಭೌಗೋಳಿಕ ಮಾಹಿತಿ ವ್ಯವಸ್ಥೆಯು ಅತ್ಯಂತ ಉಪಯೋಗಕಾರಿ. ಹೇಗೆ ? | | |
| | ***ಉತ್ತರ :*** | | |
| | * ತಂತ್ರಜ್ಞಾನ ಆಧಾರಿತ ನಕ್ಷೆಗಳ ಮಾಹಿತಿ ನೀಡುತ್ತದೆ | | |
| | * ಭೌಗೋಳಿಕ, ಸಾಮಾಜಿಕ, ಆರ್ಥಿಕ ಭೂಮೇಲ್ಮೈ ಮಾಹಿತಿಯನ್ನು ಸುಲಭವಾಗಿ ವಿಶ್ಲೇಷಿಸಬಹುದು | | |
| | * ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆ | | |
| | * ಕಂಪ್ಯೂಟರ್ ಆಧಾರಿತ ವಿಶ್ಲೇಷಣೆಯಾಗಿದೆ | 4 × ½ | 2 |
| 41. | ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು ? | | |
| | ***ಉತ್ತರ :*** | | |
| | * ಅಕ್ಷಾಂಶಗಳು | | |
| | * ಸಾಗರಗಳಿಂದ ಇರುವ ದೂರ | | |
| | * ಮಾರುತಗಳ ದಿಕ್ಕು | | |
| | * ಸಾಗರ ಪ್ರವಾಹಗಳು | 4 × ½ | 2 |
| 42. | ಭೂ ಬಳಕೆಯ ಪ್ರಕಾರಗಳು ಯಾವುವು ? | | |
| | ***ಉತ್ತರ :*** | | |
| | * ನಿವ್ವಳ ಸಾಗುವಳಿ ಕ್ಷೇತ್ರ | | |
| | * ಅರಣ್ಯ ಭೂಮಿ | | |
| | * ಬೀಳು ಭೂಮಿ | | |
| | * ಹುಲ್ಲುಗಾವಲು | | |
| | * ಬಳಕೆಯಾಗದ ವ್ಯವಸಾಯದ ಭೂಮಿ | | |
| | (ಯಾವುದಾದರೂ ನಾಲ್ಕು ಅಂಶಗಳು) | 4 × ½ | 2 |
| 43. | ಭೂ ಕುಸಿತದಿಂದ ಉಂಟಾಗುವ ಪರಿಣಾಮಗಳನ್ನು ವಿವರಿಸಿ. | | |
| | ***ಉತ್ತರ :*** | | |
| | * ನದಿ ಹರಿಯುವುದಕ್ಕೆ ಅಡ್ಡಿಯಾಗುತ್ತದೆ | | |
| | * ಸಾರಿಗೆ ಸಂಚಾರಕ್ಕೆ ಅಡ್ಡಿಯಾಗುತ್ತದೆ | | |
| | * ಹಳ್ಳಿಗಳು ಮತ್ತು ಸಸ್ಯವರ್ಗಗಳು ಭೂಗತವಾಗುತ್ತವೆ | | |
| | * ಜೀವಹಾನಿ ಮತ್ತು ಆಸ್ತಿ ಹಾನಿಯಾಗುತ್ತದೆ | 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | ಕಡಲ ಕೊರೆತವನ್ನು ಹೇಗೆ ನಿಯಂತ್ರಿಸಬಹುದು ?<br>***ಉತ್ತರ :***<br>* ತೀರ ಪ್ರದೇಶದಲ್ಲಿ ಮರಳು ಗಣಿಗಾರಿಕೆ ನಿಷೇಧಿಸುವುದು<br>* ತೀರದುದ್ದಕ್ಕೂ ತಡೆಗೋಡೆಗಳ ನಿರ್ಮಾಣ ಮಾಡುವುದು<br>* ತೀರದುದ್ದಕ್ಕೂ ಬಂಡೆಗಳ ರಾಶಿ ಹಾಕುವುದು<br>* ತೀರದುದ್ದಕ್ಕೂ ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳೆಸುವುದು 4 × ½ | 2 |
| 45. | ಜನಸಂಖ್ಯಾ ಸ್ಫೋಟವು ಹಲವಾರು ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಹೇಗೆ ?<br>***ಉತ್ತರ :***<br>* ನಿರುದ್ಯೋಗ ಸಮಸ್ಯೆಯನ್ನು ಸೃಷ್ಟಿ ಮಾಡುತ್ತದೆ<br>* ಆಹಾರದಲ್ಲಿ ಪೌಷ್ಟಿಕಾಂಶದ ಕೊರತೆ<br>* ನಿಧಾನಗತಿಯ ಆರ್ಥಿಕ ಅಭಿವೃದ್ಧಿ ಸೃಷ್ಟಿಯಾಗುತ್ತದೆ<br>* ತಲಾ ಆದಾಯ ಕಡಿಮೆಯಾಗುತ್ತದೆ<br>* ಆಹಾರ ಮತ್ತು ವಸತಿ ಸಮಸ್ಯೆ ಉಂಟಾಗುತ್ತದೆ<br>(ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| 46. | ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳೇನು ?<br>***ಉತ್ತರ :***<br>* ಉತ್ಪಾದನೆಯನ್ನು ಗರಿಷ್ಠಮಟ್ಟಕ್ಕೆ ಹೆಚ್ಚಿಸುವುದು<br>* ಉದ್ಯೋಗಾವಕಾಶಗಳ ಹೆಚ್ಚಳ<br>* ಆರ್ಥಿಕ ಅಸಮಾನತೆ ಕಡಿಮೆ ಮಾಡುವುದು<br>* ಆರ್ಥಿಕ ಸ್ಥಿರತೆ ಕಾಯ್ದುಕೊಳ್ಳುವುದು<br>* ಅರ್ಥ ವ್ಯವಸ್ಥೆಯ ಆಧುನೀಕರಣ<br>(ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| 47. | ಕೇಂದ್ರ ಸರ್ಕಾರ ಸಂಗ್ರಹಿಸುವ ಪ್ರಮುಖ ತೆರಿಗೆಯೇತರ ಆದಾಯಗಳು ಯಾವುವು ?<br>***ಉತ್ತರ :***<br>* ಭಾರತೀಯ ರಿಸರ್ವ್ ಬ್ಯಾಂಕ್‌ಗಳಿಸುವ ನಿವ್ವಳ ಲಾಭ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಭಾರತೀಯ ರೈಲ್ವೆಗಳಿಸುವ ನಿವ್ವಳ ಲಾಭ<br>* ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಲಾಭ<br>* ಸಾರ್ವಜನಿಕ ಉದ್ಯಮಗಳು ಗಳಿಸುವ ಲಾಭ $4 \times \frac{1}{2}$ | 2 |
| 48. | "ಜಾಗತೀಕರಣವು ವಿಶ್ವದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ." ಈ ಹೇಳಿಕೆಯನ್ನು ಸಮರ್ಥಿಸಿ.<br>***ಉತ್ತರ :***<br>* ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಸುಧಾರಣೆ ತಂದಿದೆ<br>* ತಾಂತ್ರಿಕ ಮತ್ತು ಸಂಪರ್ಕ ಸಾಧನಗಳ ಸುಧಾರಣೆ<br>* ಪ್ರಪಂಚದ ದೇಶಗಳ ನಡುವೆ ನಿಕಟ ಸಂಬಂಧ ಏರ್ಪಡಿಸಿದೆ<br>* ವ್ಯವಹಾರ ಮತ್ತು ಮಾರುಕಟ್ಟೆಗಳನ್ನು ದೇಶದಾದ್ಯಂತ ವಿಸ್ತರಣೆ $4 \times \frac{1}{2}$ | 2 |
| 49. | ಜೀವ ವಿಮೆ ಮಮತ್ತು ಸಾಮಾನ್ಯ ವಿಮೆ ನಡುವೆ ಇರುವ ಯಾವುದಾದರೂ ಎರಡು ವ್ಯತ್ಯಾಸ ಬರೆಯಿರಿ.<br>***ಉತ್ತರ :*** | |

| ಜೀವ ವಿಮೆ | ಸಾಮಾನ್ಯ ವಿಮೆ |
|---|---|
| * ಒಬ್ಬ ಮನುಷ್ಯನ ಜೀವವನ್ನು ತುಂಬಿಕೊಡುವುದು | * ಜೀವವಿಲ್ಲದ ವಸ್ತುಗಳ ವಿಮೆಯಾಗಿದೆ |
| * ಇದು ದೀರ್ಘ ಕಾಲದಿಂದ ಕೂಡಿರುತ್ತದೆ | * ಅಲ್ಪಕಾಲಿಕವಾದುದು |
| * ನಷ್ಟ ಪರಿಹಾರ ತತ್ವ ಸೇರಿರುವುದಿಲ್ಲ | * ನಷ್ಟ ಪರಿಹಾರ ತತ್ವ ಸೇರಿರುತ್ತದೆ |
| * ನಿಶ್ಚಿತ ಕರಾರಿಗೆ ಒಳಪಟ್ಟಿರುತ್ತದೆ | * ಅನಿಶ್ಚಿತ ಘಟನೆಯಾದಾಗ ಮಾತ್ರ ಸಾಧ್ಯವಾಗುತ್ತದೆ |
| * ವಿಮಾ ಕಂತು ಮಾಸಿಕ, ಅರ್ಧ ವಾರ್ಷಿಕ, ಅವಧಿ ಮುಗಿಯುವತನಕ ಪಾವತಿ ಆಗುತ್ತದೆ | * ಪಾಲಿಸಿ ತೆಗೆದುಕೊಂಡ ತಕ್ಷಣ ಒಮ್ಮೆಲೇ ಪಾವತಿಸಬೇಕಾಗುತ್ತದೆ |
| * ಅಜೀವ ವಿಮೆ ಪಾಲಿಸಿ, ಎಂಡೋಮೆಂಟ್ ವಿಮೆ, ವರ್ಷಾಸನ ಪಾಲಿಸಿ, ಆರೋಗ್ಯ ಪಾಲಿಸಿಗಳು | * ವಾಹನ ವಿಮೆ, ಬೆಂಕಿ, ಅಪಘಾತ ವಿಮೆ ಮನೆ ಮೇಲಿನ ವಿಮೆ ಮುಂತಾದವುಗಳಿಂದ ರೂಪಿಸುತ್ತವೆ. |

(ಎರಡರಿಂದಲೂ ಯಾವುದಾದರೂ ಎರಡು ಅಂಶಗಳು) $4 \times \frac{1}{2}$ — 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | **ಆರು ವಾಕ್ಯಗಳಲ್ಲಿ ಉತ್ತರಿಸುವುದು :** $6 \times 3 = 18$ | |
| 50. | 1857 ರ ದಂಗೆಗೆ ಆರ್ಥಿಕ ಅಂಶಗಳು ಮುಖ್ಯ ಕಾರಣವಾದವು. ಈ ಹೇಳಿಕೆಯನ್ನು ಸಮರ್ಥಿಸಿ.<br>***ಅಥವಾ***<br>ಸಾರಿಗೆ ಸಂಪರ್ಕದಲ್ಲಾದ ಬೆಳವಣಿಗೆಯು ರಾಷ್ಟ್ರೀಯತೆಗೆ ಕಾರಣವಾಯಿತು. ಸಮರ್ಥಿಸಿ.<br>***ಉತ್ತರ :***<br>* ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು.<br>* ಇಂಗ್ಲೆಂಡ್ ಕೈಗಾರಿಕೆಗಳ ಕಾರ್ಯಾಗಾರವಾಯಿತು.<br>* ಅನೇಕ ಕರಕುಶಲಗಾರರು ನಿರುದ್ಯೋಗಿಗಳಾದರು.<br>* ಹತ್ತಿ ಮತ್ತು ಉಣ್ಣೆ ಕೈಗಾರಿಕೆಗಳು ಅವನತಿ ಹೊಂದಿದವು.<br>* ಭಾರತದ ವಸ್ತುಗಳಿಗೆ ಇಂಗ್ಲೆಂಡಿನಲ್ಲಿ ದುಬಾರಿ ಸುಂಕ ಹೇರಲಾಯಿತು.<br>* ರೈತರು ತೀವ್ರ ಅವಮಾನ ಮತ್ತು ಸಂಕಷ್ಟಕ್ಕೊಳಗಾದರು. $6 \times ½$ | 3 |
| | ***ಅಥವಾ***<br>* ಸಾರಿಗೆ ಸಂಪರ್ಕವನ್ನು ಬ್ರಿಟಿಷರು ತಮ್ಮ ಹಿತಾಸಕ್ತಿಗೆ ಬಳಸಿಕೊಂಡರು.<br>* ಭಾರತದ ಮೂಲೆ ಮೂಲೆಗೆ ಶೀಘ್ರವಾಗಿ ತಲುಪಲು ರೈಲಿನ ವ್ಯವಸ್ಥೆ ಕಲ್ಪಿಸಲಾಯಿತು.<br>* ಮುಂಬೈ ಥಾಣಾ ನಡುವೆ ಪ್ರಥಮ ರೈಲು ಸಂಚಾರ ಆರಂಭವಾಯಿತು.<br>* ಕಚ್ಚಾವಸ್ತು ಮತ್ತು ಸಿದ್ಧವಸ್ತುಗಳನ್ನು ಸಾಗಿಸಲು ಅನುಕೂಲವಾಯಿತು.<br>* ದೇಶೀಯರನ್ನು ಸಂಘಟಿಸಲು ಅನುಕೂಲವಾಯಿತು.<br>* ರಾಷ್ಟ್ರೀಯತೆಗೆ ಕಾರಣವಾಯಿತು. $6 \times ½$ | 3 |
| 51. | ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳನ್ನು ವಿವರಿಸಿ.<br>***ಅಥವಾ***<br>ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.<br>***ಉತ್ತರ :***<br>* ರಾಷ್ಟ್ರದ ಭದ್ರತೆಗೆ ಸಹಕಾರಿ<br>* ರಾಷ್ಟ್ರದ ಆರ್ಥಿಕ ಸಂವರ್ಧನೆಗೆ ಸಹಕಾರಿ<br>* ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶಗಳಲ್ಲಿ ಬಿತ್ತರಿಸುವುದು<br>* ಮಿತ್ರರಾಷ್ಟ್ರಗಳನ್ನು ಹೆಚ್ಚಿಸಿಕೊಳ್ಳುವುದು<br>* ವಿರೋಧಿ ರಾಷ್ಟ್ರಗಳನ್ನು ನಿರ್ಬಂಧಿಸುವುದು<br>* ವಿಶ್ವಶಾಂತಿ ಮತ್ತು ಸಹಬಾಳ್ವೆ ಸಾಧಿಸುವುದು $6 \times ½$ | 3 |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ರಾಜಕೀಯ ಆರ್ಥಿಕ ಕ್ಷೇತ್ರಗಳಲ್ಲಿ ಸಹಕಾರ<br>* ಗೋವಾ ವಿಮೋಚನೆ ವೇಳೆ ಸಹಕಾರ<br>* ಭಾರತ ಮತ್ತು ಪಾಕಿಸ್ತಾನಗಳ ನಡುವಿನ ತಾಷ್ಕೆಂಟ್ ಒಪ್ಪಂದಕ್ಕೆ ಸಹಕಾರ<br>* ಹೊಸ ಹೊಸ ಕೈಗಾರಿಕೆಗಳನ್ನು ಬೊಕಾರೋ, ದುರ್ಗಾಪುರ ರೂರ್ಕೆಲಾ ಮತ್ತು ಭಿಲೈಗಳಲ್ಲಿ ಸ್ಥಾಪಿಸಲು ಸಹಕಾರ ನೀಡಿತು<br>* ವಿಶ್ವಸಂಸ್ಥೆಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ನೀಡಬೇಕೆಂದು ಒತ್ತಾಯಿಸಿತು<br>* 20 ವರ್ಷಗಳ ಶಾಂತಿ, ಮೈತ್ರಿ, ಸಹಕಾರಕ್ಕೆ ಒಪ್ಪಂದ ಮಾಡಿಕೊಂಡಿತು $6 \times \frac{1}{2}$ | 3 |
| 52. | ಅಸ್ಪೃಶ್ಯತಾ ನಿವಾರಣೆಗಾಗಿ ಇರುವ ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಕ್ರಮಗಳಾವುವು ?<br>***ಅಥವಾ***<br>ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ನಡುವಿನ ವ್ಯತ್ಯಾಸಗಳೇನು ?<br>***ಉತ್ತರ :***<br>* ಸಂವಿಧಾನದ 17ನೇ ವಿಧಿ ಅಸ್ಪೃಶ್ಯತಾ ಆಚರಣೆ ನಿಷೇಧಿಸಿದೆ<br>* 1955 ರಲ್ಲಿ ಅಸ್ಪೃಶ್ಯತಾ ಅಪರಾಧ ಕಾಯ್ದೆಯನ್ನು ಜಾರಿಗೆ ತಂದಿದೆ<br>* 1976 ರಲ್ಲಿ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯಿದೆಯನ್ನು ಜಾರಿಗೆ ತಂದಿದೆ<br>* ಪ್ರತಿಯೊಬ್ಬರಿಗೂ ಸಾರ್ವತ್ರಿಕ ಮತದಾನದ ಹಕ್ಕು ನೀಡಿದೆ<br>* ಹಿಂದುಳಿದ ಜಾತಿ (ಪ. ವರ್ಗ ಮತ್ತು ಪ. ಜಾತಿ) ಯವರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡಿದೆ<br>* ಎಲ್ಲಾ ನಾಗರೀಕರಿಗೂ ಸಮಾನ ಅವಕಾಶ ನೀಡಿದೆ $6 \times \frac{1}{2}$ | 3 |
| | ***ಅಥವಾ***<br>***ಸಂಘಟಿತ ಕಾರ್ಮಿಕರ*** / ***ಅಸಂಘಟಿತ ಕಾರ್ಮಿಕರ***<br>* ಇವರಿಗೆ ಅಧಿಕಾರದ ಏಣಿ ಇರುತ್ತದೆ / * ಅಧಿಕಾರದ ಏಣಿ ಶ್ರೇಣಿ ಇರುವುದಿಲ್ಲ<br>* ನಿಗದಿತ ವೇತನ ಭತ್ಯೆ ಪಡೆಯುತ್ತಾರೆ / * ನಿಗದಿತ ವೇತನ ಭತ್ಯೆ ಇಲ್ಲ<br>* ನಿವೃತ್ತಿ ಸೌಲಭ್ಯವಿದೆ / * ನಿವೃತ್ತಿ ಸೌಲಭ್ಯವಿಲ್ಲ<br>* ಕಾಯ್ದೆ ಕಾನೂನುಗಳು ಅನ್ವಯವಾಗುತ್ತವೆ / * ಕಾಯ್ದೆ ಕಾನೂನುಗಳು ಅನ್ವಯವಾಗುವುದಿಲ್ಲ<br>(ಎರಡರಿಂದಲೂ ಯಾವುದಾದರೂ ಮೂರು ವ್ಯತ್ಯಾಸಗಳು) | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 53. | ರಸ್ತೆ ಸಾರಿಗೆಯ ತೊಡಕುಗಳನ್ನು ವಿವರಿಸಿ.<br>***ಅಥವಾ***<br>ಜೈವಿಕ ತಂತ್ರಜ್ಞಾನದಿಂದ ಕೃಷಿ ಕ್ಷೇತ್ರದಲ್ಲಿ ಯಾವ ರೀತಿ ಕ್ರಾಂತಿ ಉಂಟಾಯಿತು ?<br>***ಉತ್ತರ :***<br>* ಗ್ರಾಮೀಣ ಮತ್ತು ಜಿಲ್ಲಾ ರಸ್ತೆಗಳು ಮಳೆಗಾಲದಲ್ಲಿ ಸಂಚಾರಕ್ಕೆ ಅನುಪಯುಕ್ತವಾಗಿವೆ.<br>* ಪರಿಸರ ಮಾಲಿನ್ಯ ಹಾಗೂ ಅಪಘಾತಕ್ಕೆ ಕಾರಣವಾಗುತ್ತವೆ.<br>* ಚಂಡ ಮಾರುತ ಮತ್ತು ಪ್ರವಾಹದಿಂದ ರಸ್ತೆಗಳು ಹಾಳಾಗುತ್ತಿವೆ.<br>* ರಾಜ್ಯ ಮತ್ತು ರಾಷ್ಟ್ರ ಹೆದ್ದಾರಿಗಳ ನಿರ್ಮಾಣ ಅಸಮರ್ಪಕವಾಗಿವೆ.<br>* ರಸ್ತೆ ಬದಿಯಲ್ಲಿ ಬೇಕಾದ ಅಗತ್ಯಗಳ ಕೊರತೆ.<br>* ಮಳೆಗಾಲದಲ್ಲಿ ಗುಂಡಿಗಳಾಗುತ್ತವೆ.<br>$6 \times \frac{1}{2}$ | 3 |
| | ***ಅಥವಾ***<br>* ಹೊಸ ಹೊಸ ಬೀಜಗಳು ಮತ್ತು ಔಷಧ ರಸಗೊಬ್ಬರಗಳ ಬಳಕೆಗೆ ಸಹಕಾರಿ<br>* ಹೊಸ ತಳಿಗಳ ಸಂಶೋಧನೆಗೆ ಸಹಕಾರಿಯಾಯಿತು.<br>* ಜೈವಿಕ ವೈವಿಧ್ಯತೆಗೆ ಸಹಕಾರಿಯಾಯಿತು.<br>* ವೈದ್ಯಕೀಯದಲ್ಲೂ ತಂತ್ರಜ್ಞಾನದ ಬಳಕೆಗೆ ಸಹಕಾರಿ.<br>* ವ್ಯವಸಾಯದಲ್ಲಿ ಬೃಹತ್ ಕ್ರಾಂತಿ ಉಂಟು ಮಾಡಿದೆ.<br>* ಸಸ್ಯ ಜೈವಿಕ ತಂತ್ರಜ್ಞಾನ, ಪರಿಸರ ತಂತ್ರಜ್ಞಾನದಲ್ಲಿ ಪರಿಣಾಮಕಾರಿ ಬಳಕೆ. $6 \times \frac{1}{2}$ | 3 |
| 54. | ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನಲೆಯಲ್ಲಿ ತಿಳಿಸಿ.<br>***ಅಥವಾ***<br>ಸಾರ್ವಜನಿಕ ಹಣಕಾಸು ಮತ್ತು ಖಾಸಗಿ ಹಣಕಾಸು ನಡುವಿನ ವ್ಯತ್ಯಾಸ ತಿಳಿಸಿ.<br>***ಉತ್ತರ :***<br>* ಪ್ರತಿಯೊಂದು ಹಳ್ಳಿಯ ಆಡಳಿತ, ಅಧಿಕಾರ, ಅಭಿವೃದ್ಧಿ ಜವಾಬ್ದಾರಿ ಹಳ್ಳಿಗಳಿಗೆ ನೀಡುವುದು.<br>* ಸ್ವಾವಲಂಬಿ, ಸ್ವಯಂಪೂರ್ಣ ಸಮೃದ್ಧ ಗ್ರಾಮಗಳ ಅಭಿವೃದ್ಧಿ.<br>* ಇದನ್ನು ಗಾಂಧೀಜಿಯವರು ಗ್ರಾಮ ಸ್ವರಾಜ್ಯ ಎಂದು ಕರೆದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ∗ ವಿಕೇಂದ್ರಿಕರಣವು ಶೋಷಣೆಯನ್ನು ತಡೆಯುತ್ತದೆ.<br>∗ ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ.<br>∗ ಮಾನವೀಯ ಮೌಲ್ಯಗಳನ್ನು ವೃದ್ಧಿಸುತದೆ. 6 × ½ | 3 |
| | ***ಅಥವಾ*** | |
| | ***ವೈಯಕ್ತಿಕ ಹಣಕಾಸು*** / ***ಸಾರ್ವಜನಿಕ ಹಣಕಾಸು*** | |
| | ∗ ಒಬ್ಬ ವ್ಯಕ್ತಿ ಅಥವಾ ಕುಟುಂಬದ ಆದಾಯ, ವೆಚ್ಚಗಳಿಗೆ ಸಂಬಂಧಿಸಿರುತ್ತದೆ / ∗ ಸರ್ಕಾರದ ಆದಾಯ–ವೆಚ್ಚಕ್ಕೆ ಸಂಬಂಧಿಸಿರುತ್ತದೆ | |
| | ∗ ವ್ಯಕ್ತಿಗಳು ಮೊದಲು ತಮ್ಮ ಆದಾಯವನ್ನು ಅಂದಾಜು ಮಾಡಿ ನಂತರ ಖರ್ಚು ಮಾಡುವರು / ∗ ಸರ್ಕಾರವು ಮೊದಲು ತನ್ನ ವೆಚ್ಚ ಅಂದಾಜು ಮಾಡಿ ತಕ್ಕಂತೆ ಆದಾಯ ಅಂದಾಜಿಸುತ್ತದೆ | |
| | ∗ ವ್ಯವಹಾರವು ಗೌಪ್ಯವಾಗಿರುತ್ತದೆ / ∗ ಶಾಸನ ಸಭೆಗಳಲ್ಲಿ ಚರ್ಚಿಸಿ ಮಾಧ್ಯಮಗಳಲ್ಲಿ ಪ್ರಕಟಿಸುವರು | |
| | ∗ ವ್ಯಕ್ತಿ ಅಥವಾ ಕುಟುಂಬ ಉಳಿತಾಯ ಮಾಡಿದರೆ ಅದು ಅವರ ಪ್ರಗತಿಗೆ ಪೂರಕವಾಗಿರುತ್ತದೆ / ∗ ಸರ್ಕಾರವು ಉಳಿತಾಯ ಮಾಡಿದರೆ ಅಭಿವೃದ್ಧಿ ಹೊಂದುತ್ತಿರುವ ದೇಶದ ಪ್ರಗತಿಯನ್ನು ಕುಂಠಿತಗೊಳಿಸುತ್ತದೆ | |
| | (ಎರಡರಿಂದಲೂ ಯಾವುದಾದರೂ ಮೂರು ವ್ಯತ್ಯಾಸಗಳು) 3 × 1 | 3 |
| 55. | ಬ್ಯಾಂಕ್ ಖಾತೆ ತೆರೆಯುವ ವಿವಿಧ ಹಂತಗಳನ್ನು ವಿವರಿಸಿ.<br>***ಅಥವಾ***<br>ವಿಮೆಯ ಪ್ರಾಮುಖ್ಯತೆಯನ್ನು ವಿವರಿಸಿ.<br>***ಉತ್ತರ :***<br>∗ ಯಾವ ವಿಧಾವಾದ ಬ್ಯಾಂಕ್ ಖಾತೆ ತೆರೆಯಬೇಕೆಂದು ನಿರ್ಧಾರ ಮಾಡುವುದು<br>∗ ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು<br>∗ ಪ್ರಸ್ತಾವನೆ ಅರ್ಜಿ ನಮೂನೆ ತುಂಬುವುದು<br>∗ ಪರಿಚಿತರ ಉಲ್ಲೇಖ ಕೊಡುವುದು<br>∗ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು<br>∗ ಅಧಿಕಾರಿಯ ಒಪ್ಪಿಗೆ ಪಡೆಯುವುದು<br>∗ ಪ್ರಾರಂಭಿಕ ಠೇವಣಿ ಕಟ್ಟುವುದು<br>(ಯಾವುದಾದರೂ ಆರು ಅಂಶಗಳು) 6 × ½ | 3 |
| | ***ಅಥವಾ*** | |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಅಪಾಯ, ಹಾನಿ ಅಥವಾ ಮರಣ ಸಂಭವನೀಯತೆಗೆ ಸಹಕಾರಿ<br>* ಕಡ್ಡಾಯ ಉಳಿತಾಯವನ್ನು ಪ್ರೋತ್ಸಾಹಿಸುತ್ತದೆ<br>* ವಿಮಾದಾರನ ಅಭೀಷ್ಟತೆ ಈಡೇರಿಕೆ<br>* ಹಣದ ಉಳಿತಾಯವನ್ನು ಪ್ರೋತ್ಸಾಹಿಸುತ್ತದೆ<br>* ಋಣ ಸಂದಾಯಕ್ಕೆ ಅನುವು ಮಾಡಿಕೊಡುತ್ತದೆ<br>* ತೆರಿಗೆ ವಿನಾಯಿತಿಗೆ ಸಹಕಾರಿಯಾಗಿದೆ $6 \times \frac{1}{2}$ | 3 |
| V. | ***ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :*** $1 \times 4 = 4$ | |
| 56. | ನೆಹರೂರವರು ಪ್ರಧಾನ ಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳೇನು ?<br>***ಉತ್ತರ :***<br>* ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಭಾರತದ ಮೊದಲ ಪ್ರಧಾನ ಮಂತ್ರಿಯಾದರು.<br>* ಸರದಾರ್ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಭಾರತದ ಅನೇಕ ದೇಶಿ ಸಂಸ್ಥಾನಗಳ ವಿಲೀನಿಕರಣಕ್ಕೆ ಕಾರಣರಾದರು.<br>* ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತಕ್ಕೆ ಪ್ರಜಾಪ್ರಭುತ್ವೀಯ ತಳಹದಿಯನ್ನು ಹಾಕಿದರು.<br>* ಮಿಶ್ರ ಆರ್ಥಿಕ ನೀತಿಯನ್ನು ಜಾರಿಗೆ ತಂದರು.<br>* ಬೃಹತ್ ಕೈಗಾರಿಕೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದರು.<br>* ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿ ಕನಸನ್ನು ಕಂಡರು.<br>* ಅಲಿಪ್ತ ನೀತಿಗೆ ಕಾರಣರಾದರು.<br>* ಶಾಂತಿ ಮತ್ತು ಸಹಬಾಳ್ವೆಯ ಸೂತ್ರವನ್ನು ಜಾರಿಗೆ ತಂದರು.<br>(ಯಾವುದಾದರೂ ಎಂಟು) $8 \times \frac{1}{2}$ | 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VI. 57. | **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4 | |

a) $82\frac{1}{2}^{o}$ ಪೂರ್ವ ರೇಖಾಂಶ

b) ನರ್ಮದಾ ನದಿ

c) ಬಾಂಬೆ ಹೈ




***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)***

ಭಾರತೀಯರ ಜನಜೀವನಕ್ಕೆ ಹಿಮಾಲಯ ಪರ್ವತದಿಂದಾಗುವ ಅನುಕೂಲಗಳೇನು ?

* ಭಾರತದ ಜೀನಜೀವನದ ಮೇಲೆ ಅಪಾರ ಪ್ರಭಾವ ಬೀರುತ್ತದೆ
* ಭಾರತಕ್ಕೆ ರಕ್ಷಣೆ ಒದಗಿಸುತ್ತದೆ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಏಷ್ಯಾದಿಂದ ಬೀಸುವ ಶೀತಗಾಳಿಯನ್ನು ತಡೆಯುವುದು | |
| | * ಅನೇಕ ನದಿಗಳ ಉಗಮ ಸ್ಥಳವಾಗಿದೆ | |
| | * ಜಲವಿದ್ಯುತ್‌ಶಕ್ತಿ ಉತ್ಪಾದನೆಗೆ ಸಹಕಾರಿಯಾಗಿದೆ | |
| | * ವಿಶಾಲ ಮೈದಾನ ನಿರ್ಮಿಸಿದೆ | |
| | * ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಕ್ಕೆ ಆಶ್ರಯತಾಣವಾಗಿದೆ | |
| | * ಅಪಾರ ಖನಿಜ ಸಂಪನ್ಮೂಲಗಳನ್ನೊಳಗೊಂಡಿದೆ | |
| | (ಯಾವುದಾದರೂ ಎಂಟು) $8 \times \frac{1}{2}$ | 4 |